ಮಾಡುವುದಿಲ್ಲ. ನಿನಗೆ ಮಮ್ಮುಟ್ಟಿಯಂತಹ ಗಂಡನನ್ನು ಹುಡುಕಿ ಮದುವೆ ಮಾಡಿಸ್ತೇನೆ" ಎಂದು ಅಲಿಮಾಳನ್ನು ತಬ್ಬಿಕೊಂಡಿದ್ದಳು. ಅಲಿಮಾಳಿಗೆ ಸಮಾಧಾನವಾದರೂ ಭಾವನನ್ನು ಕಂಡಾಗ ನಾಚಿಕೆಯಾಗುತ್ತಿತ್ತು. ಆಗ ಭಾವ, "ಎಂಡೇ ಮನಸಿಲೊರು ನಾಣಂ" ಎಂದು ರೇಗಿಸುತ್ತಿದ್ದರು.

ಅದೇ ಭಾವ, ಉಪ್ಪ ಉಮ್ಮ ಕಾಣೆಯಾದ ಮೇಲೆ ಎಷ್ಟು ಬದಲಾದರು! ಮೊದಲು ಹೆಸರು ಹಿಡಿದು ಕರೆಯುತ್ತಿದ್ದವರು ಈಗ "ಪುನ್ನಾರ ಮೋಳೆ" ಎಂದು ಕರೆಯತೊಡಗಿದರು. ಸಂಜೆ ಬರುವಾಗ ಏನಾದರೂ ಬೇಕರಿ ತಿಂಡಿ ಇದ್ದೇ ಇರುತ್ತಿತ್ತು. ಉಪ್ಪ ಉಮ್ಮನ ನೆನಪಾಗಿ ಅಲಿಮಾ ಕಣ್ಣೀರು ಹಾಕಿದರೆ ಅವಳನ್ನು ತಬ್ಬಿಕೊಂಡು ಭಾವ ಸಂತೈಸುತ್ತಿದ್ದರು. "ಎಲ್ಲಾ ಅವರವರ ನಸೀಬು. ನಿನ್ನ ಉಪ್ಪ ಉಮ್ಮ ಹಾಗೆ ಹೋದರೂ ಪರಮ ದಯಾಳು ಅಲ್ಲಾ ನಿನ್ನನ್ನು ನೋಡಿಕೊಳ್ಳಲೆಂದೇ ನಮ್ಮನ್ನು ಉಳಿಸಿದ್ದಾನೆ. ನಿನ್ನನ್ನು ತುಂಬಾ ಓದಿಸುತ್ತೇವೆ. ನೀನು ಓದಿ ಜಿಲ್ಲಾ ಕಲೆಕ್ಟರಾಗಬೇಕು. ಆಗ ಸಮುದ್ರದ ಆಚೆಯಿಂದ ವಿಮಾನದಲ್ಲಿ ಅರಬ್ಬಿ ರಾಜಕುಮಾರ ಬರುತ್ತಾನೆ. ಪುನ್ನಾರ ಮೋಳನ್ನು ಕಂಡು ಮೆಚ್ಚಿ ಮದುವೆಯಾಗುತ್ತಾನೆ. ಅವಳನ್ನು ಪಕ್ಕದಲ್ಲಿ ಕೂರಿಸಿಕೊಂಡು ವಿಮಾನದಲ್ಲಿ ಸಮುದ್ರ ಹಾರಿ ಅರಬಿ ದೇಶಕ್ಕೆ ಹಾರುತ್ತಾನೆ. ನಿನಗೆ ಅರಬಿ ಭಾಷೆ ಬರುವುದಿಲ್ಲವಲ್ಲಾ? ಅದಕ್ಕೆ ಮದರಸದಲ್ಲಿ ನಿನಗೆ ಅರಬಿ ಭಾಷೆ ಕಲಿಸುತ್ತಿರುವುದು."

"ನಾನು ಹಾಗೆ ಹೋದರೆ ಕುಟ್ಟ ಯಾರ ಜೊತೆಯಲ್ಲಿ ಮಲಗುತ್ತಾನೆ?"

ಕುಟ್ಟನನ್ನು ಯಾರಿಗಾದರೂ ಕೊಟ್ಟು ಬಿಡುತ್ತೇವೆಂದೋ, ಬಕ್ರೀದ್‌ನಂದು ಬಕ್ರಾನ ತಲೆಕಡಿದು ಮಾಂಸ ಮಾರುತ್ತೇವೆಂದೋ ಹೇಳಲು ಭಾವನಿಗೆ ಮನಸ್ಸಾಗಲಿಲ್ಲ.

"ಆಗ ಕುಟ್ಟ ದೊಡ್ಡವನಾಗಿರುತ್ತಾನೆ. ಅವನಿಗೆ ದೊಡ್ಡ ಕೊಂಬು, ದೊಡ್ಡ ಪರಿ, ಉದ್ದ ಗಡ್ಡ ಎಲ್ಲಾ ಬಂದಿರುತ್ತದೆ. ಆಗ ಒಂದು ಹೆಣ್ಣು ಆಡನ್ನು ತಂದು ಅವನಿಗೆ ನಿಕಾ ಮಾಡಬೇಕಾಗುತ್ತದೆ. ಆಮೇಲೆ ಅವನಿಗೆ ಹೆಣ್ಣು ಆಡಿನಲ್ಲಿ ಮಕ್ಕಳಾಗುತ್ತವೆ. ಆಗ ನಿನ್ನ ಅಕ್ಕನೂ ಒಬ್ಬಳು ಪುನ್ನಾರ ಮೋಳನ್ನು ಹೆತ್ತಿರುತ್ತಾಳೆ. ಅವಳು ನಿನ್ನ ಹಾಗೆ ಕುಟ್ಟನ ಮಗುವನ್ನು ಒಟ್ಟಿಗೆ ಮಲಗಿಸಿಕೊಳ್ಳುತ್ತಾಳೆ. ನಮ್ಮ ಮನೆಗೆ ಆಡಿನ ಮನೆ ಎಂಬ ಹೆಸರು ಬರುತ್ತದೆ."

"ನಾನು ಅರಬಿಸ್ತಾನಕ್ಕೆ ಹೋಗುವಾಗ ಕುಟ್ಟನನ್ನು ಕರಕೊಂಡು ಹೋದರೆ ಹೇಗೆ?"

"ಇಲ್ಲ ಮೋಳೆ, ವಿಮಾನದಲ್ಲಿ ನಿಮ್ಮೊಟ್ಟಿಗೆ ಕುಟ್ಟನನ್ನು ಕರೆದೊಯ್ಯುವಂತಿಲ್ಲ. ನಿನಗೆ

